# ಟೊಮ್ಯಾಟೊ ಮೂಡಿಸಿದ ಮಂದಹಾಸದಲ್ಲಿ ವ್ಯವಸ್ಥೆ ಕಲಿಯಬೇಕಾದ ಪಾಠಗಳು

**ಬಹಳ ದಿನಗಳ ನಂತರ ಟೊಮ್ಯಾಟೊ ಮೂಲಕ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಈ ಮಂದಹಾಸ ಮಾಸದಂತೆ ರೈತರ ಹಿತರಕ್ಷಿಸುವ ವ್ಯವಸ್ಥೆ ಅಗತ್ಯ. ಮಾರುಕಟ್ಟೆಯ ಬೇಡಿಕೆ ಅಂದಾಜಿಸಿ, ಅದಕ್ಕೆ ಅನುಗುಣವಾಗಿ ಬೆಳೆಯ ಪ್ರಮಾಣ ಎಷ್ಟಿದ್ದರೆ ರೈತನ ಹಿತರಕ್ಷಣೆ ಸಾಧ್ಯ ಎಂದು ಮಾರ್ಗದರ್ಶನ ಮಾಡುವ ವ್ಯವಸ್ಥೆ ನಮ್ಮಲ್ಲಿ ಎಲ್ಲಿದೆ?**

ಭಾರತದಲ್ಲಿ ಬೇಸಾಯವು ಮಳೆಯೊಂದಿಗಿನ ಜೂಜು ಎಂಬ ಮಾತಿದೆ. ಈ ಮಾತು ಇಂದಿಗೂ ದಿಟ ಮತ್ತು ಹವಾಮಾನ ಬದಲಾವಣೆಯಂಥ ಇನ್ನೂ ಕೆಲವು ಕಾರಣಗಳಿಂದ ಬೇಸಾಯಗಾರರ ಸಮಸ್ಯೆ ಬೇರೆ ಬೇರೆ ಆಯಾಮಗಳನ್ನು ಪಡೆದುಕೊಂಡಿದೆ. ಆದರೆ, ಮಳೆ ವೈಪರೀತ್ಯಕ್ಕಿಂತ ಹೆಚ್ಚಾಗಿ ನಮ್ಮ ಬೆಳೆಗಾರರನ್ನು ಕಾಡುತ್ತಿರುವುದು ಮಾರುಕಟ್ಟೆ. ಕೃಷಿ ಈಗ ಮಾರುಕಟ್ಟೆಯೊಂದಿಗಿನ ಜೂಜಾಟ ಎಂದು ಹೇಳುವ ಮಟ್ಟಿಗೆ ಅದರ ಅನಿಶ್ಚಿತತೆ ಮುಂದುವರಿದಿದೆ; ಯಾರ ಊಹೆಗೂ ಅಂಕೆಗೂ ನಿಲುಕದ ಸಮಸ್ಯೆಯಾಗಿ ಕೃಷಿಕ ಸಮುದಾಯವನ್ನು ಬಾಧಿಸತೊಡಗಿದೆ.

ಈ ಅನಿಶ್ಚಿತತೆಯು ಶಾಪವಾಗಿ ಪರಿಣಮಿಸುವುದೇ ಹೆಚ್ಚು. ಆಗೊಮ್ಮೆ ಈಗೊಮ್ಮೆ ವರವಾಗಿಯೂ ಪರಿಣಮಿಸಿ ಬೆರಗುಗೊಳಿಸಿದ್ದೂ ಉಂಟು. ಟೊಮ್ಯಾಟೊಗೆ ದಾಖಲೆ ಬೆಲೆ ಬಂದು ಕೆಲವರ ಬದುಕಿನಲ್ಲಿ ಬೆಳ್ಳಿರೇಖೆ ಮೂಡಿಸಿದ್ದು ಇದಕ್ಕೊಂದು ಇತ್ತೀಚಿನ ನಿದರ್ಶನ. ಅರ್ಧ ಎಕರೆಯಲ್ಲಿ ಟೊಮ್ಯಾಟೊ ಬೆಳೆದವರಿಗೂ ಲಕ್ಷಗಳು ಎಣಿಸುವಂಥ ಭಾಗ್ಯ. ಥೇಟ್ ಲಾಟರಿ ಹೊಡೆದಂತೆ! ವಾರ–ಒಪ್ಪೊತ್ತಿನಲ್ಲಿ ಲಕ್ಷಾಧಿಪತಿಗಳಾದವರ ಕಥೆಗಳು ಮಾಧ್ಯಮಗಳಲ್ಲಿ ರಾರಾಜಿಸಿದವು. ಕಾರು ಖರೀದಿಸಿದರಂತೆ. ಸಾಲ ತೀರಿಸಿದರಂತೆ. ವಧು ಸಿಗದೆ ಪೇಚಾಡುತ್ತಿದ್ದವರಿಗೂ ಕಂಕಣಬಲ ಕೂಡಿಬಂತಂತೆ ಎಂಬಿತ್ಯಾದಿ ಕುತೂಹಲಭರಿತ ಸುದ್ದಿಗಳು ಮಾಧ್ಯಮಗಳಲ್ಲಿ ಕಾಣಿಸಿಕೊಂಡವು.


ತಿಂಗಳ ಮಟ್ಟಿಗೆ ಟೊಮ್ಯಾಟೊನೇ ಮಾರುಕಟ್ಟೆಯ ರಾಜ. ಸುದ್ದಿಮಾಧ್ಯಮಗಳಲ್ಲಿ, ತರಕಾರಿ ಅಂಗಡಿಗಳಲ್ಲಿ, ಹರಟೆಕಟ್ಟೆಗಳಲ್ಲಿ ಅದರದೇ ಗುಣಗಾನ. ಕೆಲವರ ಬಾಳು ಬಂಗಾರವಾಗಿಸಿದ ಸುದ್ದಿಗಳು ರಾಶಿರಾಶಿ ಪ್ರಕಟವಾದವು, ಪ್ರಸಾರವಾದವು. ತೋಟಕ್ಕೆ ಕಾವಲು, ಸಿ.ಸಿ. ಟಿ.ವಿ. ಕ್ಯಾಮೆರಾ ಅಳವಡಿಕೆ, ಬೌನ್ಸರ್‌ಗಳ ನೇಮಕ, ಟೊಮ್ಯಾಟೊ ಸಾಗಿಸುತ್ತಿದ್ದ ಲಾರಿಗಳ ಅಪಹರಣ, ಹೊಟ್ಟೆಕಿಚ್ಚು ಮತ್ತು ದ್ವೇಷದ ಕಾರಣಕ್ಕೆ ರಾತ್ರಿವೇಳೆ ಹೊಲಕ್ಕೆ ನುಗ್ಗಿ ಬೆಳೆನಾಶ... ಕಾಂಚಾಣ ಕುಣಿತದ ಜೊತೆಗೆ ಮನುಷ್ಯನ ರಾಗದ್ವೇಷಗಳೂ ಹೊರಗೆ ಬಂದವು.

ಬೆಲೆ ಏರಿಕೆಯ ಬಿಸಿ ಬಲುಬೇಗ ದೆಹಲಿಗೂ ಮುಟ್ಟಿತು ಮತ್ತು ಅಷ್ಟೇ ತ್ವರಿತವಾಗಿ ಕೇಂದ್ರ ಸರ್ಕಾರದಿಂದ ಸ್ಪಂದನವೂ ದೊರೆಯಿತು. ತಾನೇ ಟೊಮ್ಯಾಟೊ ಖರೀದಿಸಿ, ರಾಷ್ಟ್ರೀಯ ಕೃಷಿ ಉತ್ಪನ್ನ ಸಹಕಾರ ಮಾರುಕಟ್ಟೆ ಒಕ್ಕೂಟ (ನಾಫೆಡ್) ಮತ್ತು ರಾಷ್ಟ್ರೀಯ ಸಹಕಾರ ಗ್ರಾಹಕ ಒಕ್ಕೂಟ (ಎನ್‌ಸಿಸಿಎಫ್) ಮೂಲಕ ರಿಯಾಯಿತಿ ದರದಲ್ಲಿ ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಗ್ರಾಹಕರಿಗೆ ಪೂರೈಸಿತು. ಇದು, ಸ್ವಾಗತಾರ್ಹ ಕ್ರಮ. ಆದರೆ, ದಕ್ಷಿಣ ಭಾರತದಲ್ಲಿ ಇಂತಹ ರಿಯಾಯಿತಿ ದರದ ಟೊಮ್ಯಾಟೊ ಏಕೋ ಲಭ್ಯವಾಗಲೇ ಇಲ್ಲ! ಅಲ್ಲದೆ, ಟೊಮ್ಯಾಟೊ ದರ ನಿಯಂತ್ರಣಕ್ಕೆ ತರುವ ಉದ್ದೇಶದಿಂದ ನೇಪಾಳದಿಂದ ಕೂಡ ಟೊಮ್ಯಾಟೊ ಆಮದು ಮಾಡಿಕೊಳ್ಳಲಾಗುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನಲ್ಲಿ ತಿಳಿಸಿದ್ದಾರೆ. ಆದರೆ, ದರ ಕುಸಿದು ಟೊಮ್ಯಾಟೊ ರಸ್ತೆಗಳಲ್ಲಿ ಹೊರಳಾಡುವಾಗ ರೈತರ ವಿಚಾರವಾಗಿ ಇದೇ ಬಗೆಯ ಮಿಡಿತ ಇರಬೇಕು ಎಂದು ಯಾರಾದರೂ ಬಯಸಿದರೆ ಅದರಲ್ಲಿ ತಪ್ಪಿಲ್ಲ, ಅಲ್ಲವೇ?

ಅಡುಗೆಮನೆಯಲ್ಲಿ ಈಗ ಟೊಮ್ಯಾಟೊ ಅನಿವಾರ್ಯ ಎಂಬ ಸ್ಥಿತಿ ಇದೆ. ಅದರೊಂದಿಗೆ ಭಾರಿ ಬೆಲೆ ಬಂದು ಟೊಮ್ಯಾಟೊ ಅಟ್ಟ ಏರಿದ ಕೂಡಲೇ ಗೃಹಿಣಿಯರಿಗೆ ಹುಣಿಸೆಯ ಹುಳಿ ನೆನಪಾಗಿದ್ದು ಮತ್ತೊಂದು ವೈಚಿತ್ರ್ಯ. ಬರಡು ನೆಲದ ರೈತರಿಗೆ ವಿಮೆಯಂತಿರುವ ಹುಣಿಸೆಹಣ್ಣಿನ ಬೆಲೆ ಕೆಲವು ವರ್ಷಗಳಿಂದ ನೆಲ ಕಚ್ಚಿತ್ತು. ಟೊಮ್ಯಾಟೊ ಬದಲಾಗಿ ಹುಣಿಸೆಹಣ್ಣು ಬಳಸಲಾರಂಭಿಸಿದ ಕೂಡಲೇ ಮಾರುಕಟ್ಟೆಯಲ್ಲಿ ಅದರ ಕಿಮ್ಮತ್ತೂ ತುಸು ಹೆಚ್ಚಿತು! ಹುಣಿಸೆ ಹಣ್ಣಿನಲ್ಲಿ ಇರುವಂಥ ಔಷಧೀಯ ಗುಣಗಳು, ಸಾರಿನ ರುಚಿ ಹೆಚ್ಚಿಸುವಂಥ ಅದರ ಉತ್ಕೃಷ್ಟ ಗುಣ ಈ ಎಲ್ಲವನ್ನೂ ಮೆಲುಕು ಹಾಕುವಂಥ ಪ್ರಮೇಯವನ್ನು ಟೊಮ್ಯಾಟೊ ದರ ಹೆಚ್ಚಳವು ಸೃಷ್ಟಿಸಿತು.

ಇದರಿಂದಾಗಿ, ಬಹಳ ದಿನಗಳ ನಂತರ ರೈತರ ಮುಖದಲ್ಲಿ ಮಂದಹಾಸ ಮೂಡಿದೆ. ಆದರೆ ಈ ಸಂತಸದೊಂದಿಗೆ ಅಪಾಯದ ಸುಳಿವೂ ಗೋಚರಿಸಲಾರಂಭಿಸಿದೆ. ಸಮೂಹ ಸನ್ನಿಗೆ ಒಳಗಾದಂತೆ ಹೆಚ್ಚಿನ ರೈತರು ಟೊಮ್ಯಾಟೊ ಬೆಳೆಯಲು ಸಿದ್ಧರಾಗುತ್ತಿದ್ದಾರೆ ಎಂಬ ವರದಿಗಳು ಇವೆ. ಮಾರುಕಟ್ಟೆಯ ಬೇಡಿಕೆ ಮೀರಿ ಫಸಲು ಬಂದರೆ ದರ ಪಾತಾಳ ಮುಟ್ಟುತ್ತದೆ. ಸಾಲ ಮಾಡಿ ಬೆಳೆ ತೆಗೆದ ರೈತರಿಗೆ ಬಹುಪಾಲು ಸಂದರ್ಭಗಳಲ್ಲಿ ಆಗುವಂತೆ ಕೈಸುಟ್ಟುಕೊಳ್ಳುವಂಥ ಸ್ಥಿತಿ ಎದುರಾಗಬಹುದು. ಮಾರುಕಟ್ಟೆಯ ಬೇಡಿಕೆ ಅಂದಾಜಿಸಿ, ಅದಕ್ಕೆ ಅನುಗುಣವಾಗಿ ಬೆಳೆಯ ಪ್ರಮಾಣ ಎಷ್ಟಿದ್ದರೆ ರೈತನ ಹಿತರಕ್ಷಣೆ ಸಾಧ್ಯ ಎಂದು ಲೆಕ್ಕಹಾಕಿ ಹೇಳುವ, ಮಾರ್ಗದರ್ಶನ ಮಾಡುವ ವ್ಯವಸ್ಥೆ ನಮ್ಮಲ್ಲಿ ಎಲ್ಲಿದೆ?

**■ ಎನ್. ಉದಯಕುಮಾರ್**



ಈಶ್ವರ್